3) ಪ್ರಕಟಣೆ

ವಿಷಯ : ಮಾನ್ಯ ಪಶುಸಂಗೋಪನೆ ಸಚಿವರಿಂದ ಮಾನ್ಯ ಸದಸ್ಯರುಗಳಿಗೆ ಭೋಜನ ಕೂಟದ ಏರ್ಪಾಡು.

ಉಪಾಧ್ಯಕ್ಷರು :- ಶ್ರೀ ಮಿರಾಜುದ್ದೀನ್ ಎನ್. ಪಾಟೀಲ್, ಪಶುಸಂಗೋಪನೆ ಹಾಗೂ ವಕ್ಫ್ ಸಚಿವರು ಈ ದಿನ ಮಧ್ಯಾಹ್ನ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭೋಜನ ಕೂಟವನ್ನು ಏರ್ಪಡಿಸಿರುತ್ತಾರೆ, ಮಾನ್ಯ ಸದಸ್ಯರು ಎಲ್ಲರೂ ಹೋಗಬೇಕೆಂದು ವಿನಂತಿ, ಈಗ ಸದನವನ್ನು 3.00 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2.00 ಗಂಟೆ 2 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3-16 ಗಂಟೆಗೆ ಸಮಾವೇಶಗೊಂಡಿತು. ಶ್ರೀ ಕೃಷ್ಣ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

4) ವಿತ್ತೀಯ ಕಾರ್ಯಕಲಾಪ :

2005-06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ. (ಬೇಡಿಕೆಗಳ ಸಂ. 1, 23 ಮತ್ತು 17)

ಅ) ಕೃಷಿ ಸಚಿವರಿಂದ ಉತ್ತರ

ಅಧ್ಯಕ್ಷರು :- ಈಗ ಮಾನ್ಯ ಶ್ರೀನಿವಾಸಗೌಡರು.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೇ, ನಾನು ಇನ್ನೂ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡುವುದು ಇದೆ. ನಮಗೆ ಅವಕಾಶ ಕೊಟ್ಟಿಲ್ಲ. ಬಹಳ ಪ್ರಮುಖವಾಗಿ ಹೇಳುವುದು ಇದೆ.

ಅಧ್ಯಕ್ಷರು :- ಈಗಾಗಲೇ ಚರ್ಚೆಯನ್ನು ಮುಕ್ತಾಯ ಮಾಡಿದ್ದೇನೆ.

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ :- ಇನ್ನೂ ಹತ್ತು ನಿಮಿಷಗಳ ಕಾಲಾವಕಾಶವನ್ನಾದರೂ ಕೊಡಬೇಕು.

(ಗೊಂದಲ)

ಅಧ್ಯಕ್ಷರು :- ದಯಮಾಡಿ ಕೇಳಿ. ಇನ್ನೂ ಅನೇಕ ಬೇಡಿಕೆಗಳಿವೆ. ಆ ಬೇಡಿಕೆಗಳ ಮೇಲೆ ಮಾತನಾಡಲು ನಾನು ಅವಕಾಶವನ್ನು ಕೊಡುತ್ತೇನೆ. ದಯಮಾಡಿ ಈಗ ಉತ್ತರ ಕೊಡಿಸುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಈಗ ಶ್ರೀನಿವಾಸಗೌಡರೇ